# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **201** |
| ಉತ್ತರಿಸಬೇಕಾದ ದಿನಾಂಕ | : | 28.01.2026 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ಇರುವ ವಸತಿರಹಿತರ ಸಂಖ್ಯೆ ಎಷ್ಟು: ಕಳೆದ ಎರಡು ವರ್ಷಗಳಲ್ಲಿ ಎಷ್ಟು ಹೊಸ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ;</td><td>ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 2018ರಲ್ಲಿ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ವಸತಿರಹಿತರ/ ನಿವೇಶನ ರಹಿತರ ಸಮೀಕ್ಷೆ ಹಾಗೂ 2017ರಲ್ಲಿ ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆಯಡಿ ನಗರ ಪ್ರದೇಶದಲ್ಲಿ ವಸತಿ/ನಿವೇಶನ ರಹಿತರ ಸಮೀಕ್ಷೆಯನ್ನು ಕೈಗೊಳ್ಳಲಾಗಿದ್ದು, ಅದರನ್ವಯ ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ವಸತಿ ಯೋಜನೆಯಡಿ ಮನೆ ಮಂಜೂರಾತಿಗೆ ಅರ್ಜಿ ಸಲ್ಲಿಸಿರುವ ವಸತಿರಹಿತ ಕುಟುಂಬಗಳ ವಿವರ ಈ ಕೆಳಗಿನಂತಿದೆ:
<table>
<tr><th>ಜಿಲ್ಲೆ</th><th>ಪ್ರದೇಶ</th><th>ವಸತಿರಹಿತರು</th><th>ನಿವೇಶನ ರಹಿತರು</th><th>ಒಟ್ಟು</th></tr>
<tr><td rowspan="2">ಕಲಬುರಗಿ</td><td>ಗ್ರಾಮೀಣ</td><td>148698</td><td>4607</td><td>153305</td></tr>
<tr><td>ನಗರ</td><td>16495</td><td>31614</td><td>48109</td></tr>
<tr><td colspan="2">ಒಟ್ಟು</td><td>165193</td><td>36221</td><td>201414</td></tr>
</table>
2023-24 ಹಾಗೂ 2024-25ನೇ ಸಾಲಿಗೆ ವಿವಿಧ ವಸತಿ ಯೋಜನೆಗಳಡಿ 41,943 ಫಲಾನುಭವಿಗಳನ್ನು ಆಯ್ಕೆ ಮಾಡಿ ಅನುಮೋದನೆ ನೀಡಲಾಗಿದೆ.</td></tr>
<tr><td>ಆ)</td><td>ವಸತಿ ಇಲಾಖೆಯ ತಂತ್ರಾಂಶದಲ್ಲಿ (Software) ತಾಂತ್ರಿಕ ದೋಷಗಳಿಂದಾಗಿ ಅರ್ಹ ಫಲಾನುಭವಿಗಳ ಹೆಸರು ಕೈಬಿಟ್ಟು ಹೋಗಿರುವುದು ನಿಜವೇ;</td><td>ಮನೆ ಮಾರ್ಗಸೂಚಿಯನ್ವಯ ವಿವಿಧ ವಸತಿ ಯೋಜನೆಗಳಡಿ ಸರ್ಕಾರದಿಂದ ಹಂಚಿಕೆ ಮಾಡಲಾದ ಮನೆಗಳ ಗುರಿಯ ಎದುರಾಗಿ ಅರ್ಹ ಫಲಾನುಭವಿಗಳನ್ನು ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಸಭೆಯ ಮೂಲಕವೇ ಆಯ್ಕೆ ಮಾಡಲಾಗುತ್ತಿದೆ.<br><br>ಫಲಾನುಭವಿಗಳ ಆಯ್ಕೆಯಲ್ಲಿ ಪುನರಾವರ್ತನೆಯನ್ನು ತಡೆಗಟ್ಟುವ ಸಲುವಾಗಿ ಆಧಾರ್/ಪಡಿತರ ಚೀಟಿ ಹಾಗೂ ಜಾತಿ ಮತ್ತು ಆದಾಯ ಪ್ರಮಾಣವನ್ನು ಕಡ್ಡಾಯವಾಗಿ ತಂತ್ರಾಂಶದಲ್ಲಿ ನಮೂದಿಸಲಾಗುತ್ತಿರುವುದರಿಂದ ಅರ್ಹ ಫಲಾನುಭವಿಗಳ ಹೆಸರು ಕೈಬಿಟ್ಟು ಹೋಗುವ ಪ್ರಶ್ನೆ ಉದ್ಭವಿಸುವುದಿಲ್ಲ.</td></tr>
<tr><td>ಇ)</td><td>ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನಿವೇಶನ ರೈತರಿಗಾಗಿ ಸರ್ಕಾರ ಹೊಸದಾಗಿ ಜಮೀನು ಗುರುತಿಸಿ ನಿವೇಶನ ಹಂಚಿಕೆ ಮಾಡುವ ಯೋಜನೆ ಹೊಂದಿದೆಯೇ.</td><td>ಅನೇಕ ಅರ್ಹ ವಸತಿರಹಿತ ಕುಟುಂಬಗಳು ಸ್ವಂತ ನಿವೇಶನ ಹೊಂದಿಲ್ಲದ ಕಾರಣ ವಸತಿ ಸೌಕರ್ಯದಿಂದ ವಂಚಿತರಾಗುತ್ತಿರುವುದನ್ನು ಮನಗಂಡು ರಾಜ್ಯ ಸರ್ಕಾರದಿಂದ ಮುಖ್ಯಮಂತ್ರಿಗಳ ಗ್ರಾಮೀಣ ಹಾಗೂ ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.<br><br>ಈ ಯೋಜನೆಗಳಡಿ ಅರ್ಹ ಕುಟುಂಬಳಿಗೆ ನಿವೇಶನ ಹಂಚಿಕೆ ಮಾಡಲು ಸ್ಥಳೀಯವಾಗಿ ಲಭ್ಯವಿರುವ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿಗಳಿಂದ ಮಂಜೂರು ಮಾಡಿಸಿಕೊಂಡು ಬಳಸಿಕೊಳ್ಳಬಹುದಾಗಿದೆ. ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಮಾತ್ರ ವಸತಿಗೆ ಸೂಕ್ತ ಖಾಸಗಿ ಜಮೀನು ಖರೀದಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಜಮೀನು ಖರೀದಿ ಸಮಿತಿ ಮೂಲಕ ಕ್ರಮವಹಿಸಲಾಗುತ್ತಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ವಇ 33 ಹೆಚ್‌ಎಹೆಚ್ 2016 (ಭಾ-2), ದಿನಾಂಕ: 12. 07.2016 ರಲ್ಲಿ ಜಮೀನು ಖರೀದಿ ದರಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.ವಿವರ ಕೆಳಕಂಡತಿದೆ.</td></tr>
</table>

| ಕ್ರ.ಸಂ | ಪ್ರದೇಶ | ಮಾರ್ಗಸೂಚಿ ಬೆಲೆ | ಗರಿಷ್ಠ ಮಿತಿ (ಪ್ರತಿ ಎಕರೆಗೆ) .ಲಕ್ಷಗಳಲ್ಲಿ |
|---|---|---|---|
| 1 | ಗ್ರಾಮೀಣ | ಮಾರ್ಗಸೂಚಿ ಬೆಲೆಯ ನಾಲ್ಕು ಪಟ್ಟು | 9.00 |
| 2 | ಪಟ್ಟಣ ಪಂಚಾಯಿತಿ | ಮಾರ್ಗಸೂಚಿ ಬೆಲೆಯ ಮೂರು ಪಟ್ಟು (ಯಾವುದು ಕಡಿಮೆಯೋ ಅದು) | 12.00 |
| 3 | ಪುರಸಭೆ | | 15.00 |
| 4 | ನಗರಸಭೆ | | 22.5 |
| 5 | ಮಹಾನಗರ ಪಾಲಿಕೆ | | 37.50 |
| 6 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | | 75.00 |

ನಿವೇಶನ ಹಂಚಿಕೆಗೆ ಕಲಬುರಗಿ ಜಿಲ್ಲೆಯ ನಗರ ಪ್ರದೇಶದಲ್ಲಿ 74.64 ಎಕರೆ ಮತ್ತು ಗ್ರಾಮೀಣ ಪ್ರದೇಶದಲ್ಲಿ 27.17 ಎಕರೆ ಒಟ್ಟು 102 ಎಕರೆ ಜಮೀನನ್ನು ನಿವೇಶನ ಹಂಚಿಕೆಗೆ ಕಾಯ್ದಿರಿಸಲಾಗಿದೆ.

ಜಮೀನಿನ ಲಭ್ಯತೆ ಹಾಗೂ ನಿವೇಶನರಹಿತರ ಸಂಖ್ಯೆಗೆ ಅನುಗುಣವಾಗಿ ಹಂತ-ಹಂತವಾಗಿ ನಿವೇಶನ ವಿತರಿಸಲು ಕ್ರಮವಹಿಸಲಾಗುತ್ತಿದ್ದು, ನಿವೇಶನ ಹಂಚಿಕೆಗೆ ಯಾವುದೇ ಕಾಲಮಿತಿ ಇರುವುದಿಲ್ಲ.

ಸಂಖ್ಯೆ: ವಇ 18 ಹೆಚ್‌ಎಎಂ 2026

(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು